**ಕಥೆ**




**ಕಲ್ಲೇಶ್ ಕುಂಬಾರ್**

ಕಲೆ: ವಿಶ್ವನಾಥ್ ಎ.ಎಸ್


# ಅನಾಹತನಾದ

ನಿಜ ಹೇಳಬೇಕೆಂದರೆ ಆ ಮುಖವನ್ನು ಆತ ಎಂದೂ ಯಾವ ಕಾರಣಕ್ಕೂ ಕೂಡ ಹಿಂಬಾಲಿಸುತ್ತಿರಲಿಲ್ಲವಾದರೂ ಸಹ ಅದೇ ತನ್ನ ಬೆನ್ನು ಬಿದ್ದಿದೆ ಎಂಬ ವಿಚಾರವು ಸೂಕ್ಷ್ಮವಾಗಿ ಆತನ ಅರಿವಿಗೆ ಬರುತ್ತಿದ್ದಂಗೆ ಇನ್ನಿಲ್ಲದ ತಳಮಳವೊಂದು ಮನದೊಳಗೆ ಶುರುವಾಗಿಬಿಟ್ಟಿತು! ಆತನಿಗೆ ಆ ಕ್ಷಣದಿಂದ ಶುರುವಾದ ಆ ತಳಮಳ ಮಾತ್ರ ಹೇಳತೀರದು. ಏಕೆಂದರೆ ಆ ಮುಖದ ಪರಿಚಯ ಆತನಿಗೆ ಈ ಹಿಂದೆ ಇರಲಿಲ್ಲವಾದ್ದರಿಂದಲೂ ಅಥವಾ ಅಚಾನಕ್ಕಾಗಿ ಎಂದೋ ದಾರಿಯಲ್ಲಿ ಎದುರಾದಾಗಲೊ ಅರೆಕ್ಷಣ ತನ್ನ ಸ್ಮೃತಿಪಟಲದ ಮೇಲೆ ಆ ಮುಖದ ಅಸ್ಪಷ್ಟ ಚಿತ್ರ ಮೂಡಿರಬೇಕು ಎಂದುಕೊಂಡು ನೆನಪುಗಳನ್ನೊಮ್ಮೆ ತನ್ನಷ್ಟಕ್ಕೆ ತಾನೇ ತಡಕಾಡಿಕೊಂಡರೂ ಆ ನೆನಪುಗಳ ಆಳದಿಂದ ಮುಖದ ಸ್ಪಷ್ಟ ಚಿತ್ರ ಮೂಡಿ ಬರಲಿಲ್ಲವಾದ್ದರಿಂದಲೂ ಇನ್ನಿಲ್ಲದ ಆತಂಕಕ್ಕೀಡಾದ. ಈ ಆತಂಕ ಆತನ ನೆಮ್ಮದಿಯನ್ನೇ ಇಲ್ಲವಾಗಿಸಿ ಬಿಟ್ಟಿತು. ದಿನ ಕಳೆದಂತೆ ಆತ ಊಟ, ನಿದ್ದೆ, ನೀರಡಿಕೆಗಳೆಲ್ಲವನ್ನೂ ತೊರೆದು, ತನ್ನನ್ನು ಬಿಡದೇ ಹಿಂಬಾಲಿಸುತ್ತಿರುವ ಆ ಅಸ್ಪಷ್ಟ ಮುಖದ ಕುರಿತಾಗಿಯೇ ಯೋಚಿಸತೊಡಗಿದ. ಆದರೆ, ಆ ಯೋಚನೆ ಅದಾವ ಪರಿಯಲ್ಲಿ ಆವರಿಸಿಕೊಂಡಿತೆಂದರೆ ತನ್ನನ್ನು ಈಟಿಯಂತೆ ಇರಿಯುತ್ತಿದ್ದ ಆ ಮುಖವನ್ನು ಒಮ್ಮೊಮ್ಮೆ ಎಲ್ಲೋ ಯಾವಾಗಲೋ ಕಂಡಿರಬಹುದೇನೋ ಎಂಬ ಭ್ರಮೆಗೆ ಒಳಗಾದರೆ, ಮಗದೊಮ್ಮೆ, ಊಹೂಂ... ಆ ಮುಖವನ್ನು ತಾನೆಂದೂ ಕಂಡಿರಲಿಕ್ಕೆ ಸಾಧ್ಯವೇ ಇಲ್ಲ!- ಎಂದು ಪದೇಪದೇ ಗೊಂದಲಕ್ಕೀಡಾಗುತ್ತಿದ್ದ. ಈ ಗೊಂದಲದಿಂದಾಗಿ ಸದಾ ಚಡಪಡಿಕೆ, ಸಂಕಟಗಳಲ್ಲಿ ಇನ್ನಿಲ್ಲದಂಗೆ ನವೆಯುತ್ತಿದ್ದ ಆತ ಕ್ರಮೇಣವಾಗಿ ಲವಲವಿಕೆಯನ್ನು ಕಳೆದುಕೊಂಡು ನೀರಸ ಬದುಕನ್ನು ದೂಡತೊಡಗಿದ. ಹಗಲುರಾತ್ರಿ ಅದೇ ಚಿಂತೆಯಲ್ಲಿ ಕಾಲ ಕಳೆಯಲಾರಂಭಿಸಿದ. ಅಷ್ಟಕ್ಕೂ ಆತ ಅರೆಗಳಿಗೆ ಎಲ್ಲ ಮರೆತು ನಿದ್ದೆ ಹೋಗಬೇಕೆಂದು ಕಣ್ಮುಚ್ಚಿದರೆ ಸಾಕು, ಆ ಮುಖದ ಎದುರಿಗೆ ತಾನು ದಯನೀಯ ಸ್ಥಿತಿಯಲ್ಲಿ ವರವೊಂದನ್ನು ಬೇಡುವಂತೆ ಕೈಮುಗಿದು ನಿಂತಂತಾಗಿ ಬೆಚ್ಚಿಬೀಳುತ್ತಿದ್ದ! ಒಂದು ರೀತಿಯಲ್ಲಿ, ದಿನದಿಂದ ದಿನಕ್ಕೆ ಆ ಮುಖದ ವಿಚಾರದಲ್ಲಿ ಹುತ್ತದಂತೆ ಭಯ ಬೆಳೆಯಲಾರಂಭಿಸಿತು.

ಆದರೂ ಕೂಡ ವಿಚಿತ್ರವೆಂದರೆ ಆ ಮುಖಕ್ಕಂತೂ ಕರುಣೆಯೇ ಇದ್ದಂತಿರಲಿಲ್ಲ. ಆತನೊಳಗೆ ಇನ್ನಿಲ್ಲದಂಗೆ ಭಯ ಹುಟ್ಟಿಸುವುದನ್ನೇ ಗುರಿಯಾಗಿಸಿಕೊಂಡಿದ್ದ ಅದು ಸದಾ ಆತನ ಮನೆ ಬಾಗಿಲಲ್ಲಿ ಹೊಂಚುಹಾಕಿ ಕುಂತಿರುತ್ತಿತ್ತು. ಇನ್ನೇನು ಬಾಗಿಲನ್ನು ದಾಟಿಕೊಂಡು ಒಳಬಂದು ಇಡಿಯಾಗಿ ಆತನನ್ನು ಆವರಿಸಿಕೊಂಡು, ದಿಢೀರ್ ಎಂದು ಸೆಳೆದೊಯ್ಯುತ್ತದೇನೋ ಎಂಬ ಭಾವ ಅದರ ಮುಖದಲ್ಲಿ ಯಾವಾಗಲೂ ತುಂಬಿ ಕೊಂಡಿರುತ್ತಿತ್ತು. ಹೀಗಾಗಿ ಆತನೊಳಗೆ ಹೊತ್ತು ಗೊತ್ತಿಲ್ಲದ ವೇಳೆಯಲ್ಲಿ ಏನೇನೋ ಇಲ್ಲಸಲ್ಲದ ಆಲೋಚನೆಗಳು ಬರಲಾರಂಭಿಸಿದವು. ಆ ಮುಖ ಯಾರದು?; ತನಗೂ ಅದಕ್ಕೂ ಇರಬಹುದಾದ ಸಂಬಂಧವಾದರೂ ಏನು?; ತನ್ನಿಂದ ಅದಕ್ಕೆ ಏನಾಗ ಬೇಕಿದೆ?, ಅಥವಾ ಅದರಿಂದ ತನಗೇನಾದರೂ